ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು):

ಅ) ಈ ಪ್ರಸ್ತಾವನೆ ಇನ್ನೂ ಪರಿಶೀಲನೆಯ ಹಂತದಲ್ಲಿದೆ.

ಆ) ಈ ಬಗ್ಗೆ ಇಲಾಖೆಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಬರಬೇಕಾಗಿದೆ.

ಇ) ಇಲಾಖೆಯಿಂದ ಪ್ರಸ್ತಾವನೆ ಬಂದ ನಂತರ ಸೂಕ್ತವಾಗಿ ಪರಿಶೀಲಿಸಿ ನಿರ್ಧಾರ ಕೈಗೊಳ್ಳಲಾಗುವುದು.

381(683) ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ್ (ಚಿತ್ತಾಪುರ): ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ಬಸ್ ಡಿಪೋ ಈ ಮೊದಲು ಗುಲ್ಬರ್ಗಾ ಡಿವಿಷನ್‌ನಲ್ಲಿ ಇದ್ದದ್ದು ಯಾದಗಿರಿಗೆ ವರ್ಗಾಯಿಸಲಾಗಿದ್ದು ನಿಜವೇ; ಹಾಗಿದ್ದಲ್ಲಿ, ತಕ್ಷಣವೇ ಚಿತ್ತಾಪುರಕ್ಕೆ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗುವುದೇ;

ಆ) ಚಿತ್ತಾಪುರ ಡಿಪೋ ಪ್ರಾರಂಭವಾದಾಗಿನಿಂದಲೂ ಪ್ರತಿವರ್ಷ ಡಿಪೋಗೆ ಇಲ್ಲಿವರೆಗೆ ಎಷ್ಟು ಬಸ್ಸುಗಳನ್ನು ಮಂಜೂರು ಮಾಡಲಾಗಿದೆ;

ಇ) ಗುಲ್ಬರ್ಗಾ ಜಿಲ್ಲೆಯಲ್ಲಿನ ಬೇರೆ ಬೇರೆ ಡಿಪೋಗಳಿಗೆ ಪ್ರತಿ ವರ್ಷ ಎಷ್ಟು ಹೊಸ ಬಸ್ಸುಗಳನ್ನು ಒದಗಿಸಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ನಿಜ, ಇಲ್ಲ.

ಆ) ಪ್ರತಿ ವರ್ಷ ನೀಡಲಾದ ಒಟ್ಟು ಬಸ್ಸುಗಳ ವಿವರ ಈ ಕೆಳಗಿನಂತಿದೆ:

ವರ್ಷ	ನೀಡಿದ ಬಸ್ಸುಗಳು
1) ನವೆಂಬರ್ 97 ರಿಂದ ಮಾರ್ಚ್ 1998	13
2) 1998–99	03
3) 1999–00	Nil
4) 2000–01	08
5) 2001–02	01
6) 2002–03	03
7) 2003–04	06
8) 2004–05	Nil
ಒಟ್ಟು	34

ಇ) ಗುಲ್ಬರ್ಗಾ ಜಿಲ್ಲೆಯ ವಿಭಾಗಗಳಾದ ಗುಲ್ಬರ್ಗಾ ಮತ್ತು ಯಾದಗಿರಿ ಡಿಪೋಗಳಿಗೆ ಪ್ರತಿ ವರ್ಷ ನೀಡಿದ ಹೊಸ ಬಸ್ಸುಗಳ ವಿವರ ಈ ಕೆಳಗಿನಂತಿದೆ:

ಗುಲ್ಬರ್ಗಾ ವಿಭಾಗ

ವರ್ಷ	ಗುಲ್ಬರ್ಗಾ	ಗುಲ್ಬರ್ಗಾ	ಗುಲ್ಬರ್ಗಾ	ಅಳಂದ	ಚಿನ್ಮೋಲಿ	ಜೇವರ್ಗಿ	ಒಟ್ಟು
	1	2	3	4	5	6	
ನವೆಂಬರ್ 97ರಿಂದ ಮಾರ್ಚ್ 98	02	22	02	0	0	0	26
1998–99	12	29	12	6	0	0	59
1999–00	08	11	09	08	0	0	36
2000–01	19	14	06	10	09	0	58
2001–02	07	11	12	03	02	0	35
2002–03	06	13	04	03	0	0	26
2003–04	06	10	01	04	04	0	25
2004–05	0	0	0	0	0	05	05
ಒಟ್ಟು	60	110	46	34	15	05	270

ಯಾದಗಿರಿ ವಿಭಾಗ

ವರ್ಷ	ಯಾದಗಿರಿ	ಶಹಾಪುರ	ಚಿತ್ತಾಪುರ	ಒಟ್ಟು
ನವೆಂಬರ್ 97ರಿಂದ ಮಾರ್ಚ್ 98	04	04	13	21
1998–99	13	06	03	22
1999–00	06	05	Nil	11
2000–01	12	13	08	33
2001–02	0	01	01	02
2002–03	09	5	03	27
2003–04	04	08	6	18
2004–05	Nil	Nil	Nil	0.7
ಒಟ್ಟು	48	52	34	141

382 (684) ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್ (ಚಿತ್ತಾಪುರ): ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ತಾಪುರ ಮತ ಕ್ಷೇತ್ರದಲ್ಲಿ ಬರುವ ಬಾಜಿಕೊಟ್ಟನೂರ್, ಕರದಾಳ್, ಮಾವಿನ ಸೂರ್, ಅರಳಿಕಲ್, ಮುಕ್ತಾ, ಮುಗಳ್‌ನಗ, ಪಾಳ, ಕುಮಸಿ, ಹೀಗೆ ಇಲ್ಲಿರುವ ಸಣ್ಣ ನೀರಾವರಿ ಕೆರೆಗಳಿಗೆ ಕಾಲುವೆಗಳು ಇರದೆ ನೀರು ಇದ್ದರೂ ಕೂಡ ರೈತರ ಜಮೀನಿನ ನೀರು ಕೊಡಲು ಸಾಧ್ಯವಾಗದಿರುವುದು ನಿಜವೇ? ಹಾಗಿದ್ದಲ್ಲಿ, ಸರ್ಕಾರ ಈ ನಿಟ್ಟಿನಲ್ಲಿ ಕೈಗೊಳ್ಳಲಿರುವ ಕ್ರಮಗಳಾವುವು?